**ದಿನಾಂಕಃ26-05-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಆರ್.ಪಿ.ಟಿ., ಎದುರುದಾರರ ಪರ ವಕೀಲರಿಂದ**

ನಾನು ಮೀರಾಸಾಬಿಹಳ್ಳಿ ಗ್ರಾಮದಲ್ಲಿ 2015 ರಲ್ಲಿ ಎಸ್.ಎಸ್.ಎಲ್.ಸಿ., ವ್ಯಾಸಂಗ ಮಾಡಿರುತ್ತೇನೆ. ನನಗೆ ಕನ್ನಡ ಹಾಗೂ ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ. ಎದುರುದಾರ ನನ್ನ ಸಂಬಂಧಕನಲ್ಲ. ನನ್ನ ಹಾಗೂ ಎದುರುದಾರರ ಮದುವೆ ದಿನಾಂಕ 22.05.2022 ರಂದು ದೊಡ್ಡಚೆಲ್ಲೂರು ಗ್ರಾಮದ ಬಯಲು ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನೇರವೇರಿರುತ್ತದೆ. ನಮ್ಮ ಮದುವೆ ಸಮಯದಲ್ಲಿ



ಲಗ್ನ ಪತ್ರಿಕೆ ಮಾಡಿಸಿರುವುದಿಲ್ಲ. ನನ್ನ ಮದುವೆಗೆ ನಮ್ಮ ಕುಟುಂಬದವರಾದ ಹೇಮಣ್ಣ, ತನುಶ್ರೀ, ನಂದನ್, ದೇವೀರಮ್ಮ, ಬೊಮ್ಮಯ್ಯ, ಕಾವ್ಯ, ಈಶ್ವರ್ ಹಾಗೂ ಇತರೆಯವರು ಹಾಗೂ ಎದುರುದಾರರ ಕಡೆಯಿಂದ ಚಿತ್ರಯ್ಯ, ನುಂಕೇಶ್, ವಿರೇಶ್, ವೀರಣ್ಣ, ಗಂಗಮ್ಮ, ಅಶ್ವಿನಿ, ಶಿವಮ್ಮ ಹಾಗೂ ಇತರೆಯವರು ಹಾಜರಿದ್ದರು. ನನ್ನ ಮದುವೆ ಸಮಯದಲ್ಲಿ ಹಣವನ್ನು ಕೊಡುವ ಹಾಗೂ ತೆಗೆದುಕೊಳ್ಳುವ ವ್ಯವಹಾರ ನಡೆದರುವುದಿಲ್ಲ. ನಾವು 20,000/- ಹಣವನ್ನು ಖರ್ಚು ಮಾಡಿ ಮದುವೆ ಮಾಡಿರುತ್ತೇವೆ. ನಾವು ಸದರಿ ಹಣವನ್ನು ಗಂಡನ ಕಡೆಯವರಾದ ಗಂಡಿನ ಅಣ್ಣನಾದ ಚಿತ್ರಯ್ಯ ತಂದೆ ವೀರಣ್ಣ, ತಾಯಿ ಗಂಗಮ್ಮ ರವರಗೆ ಮದುವೆ ಖರ್ಚಿಗಾಗಿ ನೀಡಿರುತ್ತೇವೆ. ನಾವು ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇವೆ. ಸದರಿ ಹಣ ನೀಡಿದ್ದಕ್ಕೆ ನಾವು ದಾಖಲೆಯನ್ನು ಬರೆಸಿಕೊಂಡಿರುವುದಿಲ್ಲ.

ಎದರುದಾರರು ನನಗೆ ಹಲ್ಲೆ ಮಾಡಿದ್ದಕ್ಕೆ ಸಂಬಂಧಸಿದಂತೆ ಪರಶುರಾಂಪುರದಲ್ಲಿ ದಿನಾಂಕ 15.08.2022 ರಂದು ದೂರನ್ನು ದಾಖಲಿಸಿರುತ್ತೇನೆ. ಸದರಿ ದೂರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ದೂರನ್ನು ದಾಖಲಿಸಿದ ನಂತರ ಪೊಲೀಸರು ಎದರುದಾರರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆಯಲಾಗಿರುತ್ತದೆಯೇ ಎಂದರೆ ಸಾಕ್ಷಿಯು ಪೊಲೀಸರವರು ಠಾಣೆಗೆ ಕರೆಸಿ ಪಂಚಾಯಿತಿ ಮಾಡಿ ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ಪೊಲೀಸರು ನಮ್ಮ

ಹೇಳಿಕೆಯನ್ನು ಪಡೆದಿರುವುದಿಲ್ಲ. ಎದುರುದಾರನು ನಾನು ದೂರು ನೀಡಿದ ಮಾರನೆ ದಿನ ದೂರನ್ನು ದಾಖಲಿಸಿರುತ್ತಾನೆ.

ನಾನು ಮತ್ತು ಎದುರುದಾರರು ಮದುವೆಯಾದ ನಂತರ ಮೂರು ತಿಂಗಳು ಸುಖವಾಗಿ ಸಂಸಾರವನ್ನು ಮಾಡಿರುತ್ತೇವೆ. ದೂರನ್ನು ದಾಖಲಿಸುವ ಪೂರ್ವದಲ್ಲಿ ಗ್ರಾಮದಲ್ಲಿ ಪಂಚಾಯಿತಿಯನ್ನು ಮಾಡಲಾಗಿದೆಯೇ ಎಂದರೆ ಸಾಕ್ಷಿಯು ನನಗೆ ಹೊಡೆದ ದಿನ ಹಾಲಗೊಂಡನಹಳ್ಳಿ ಗ್ರಾಮದಲ್ಲಿ ನನ್ನ ತವರು ಮನೆಯಲ್ಲಿ ಪಂಚಾಯಿತಿಯನ್ನು ಮಾಡಲಾಗಿರುತ್ತದೆ. ದಿನಾಂಕ 14.08.2022 ರಂದು ಸಂಜೆ 05-00 ಗಂಟೆ ಸಮಯದಲ್ಲಿ ಎದುರುದಾರನೊಂದಿಗೆ ಆತನ ತಾಯಿ ಗಂಗಮ್ಮ, ತಂದೆ ವೀರಣ್ಣ, ಚಿತ್ರಯ್ಯ ಹಾಗೂ ನುಂಕಣ್ಣರವರು ನನ್ನ ತವರು ಮನೆಗೆ ಬಂದು ಕೆಳಗೆ ಕೆಡವಿ ಹಲ್ಲೆ ಮಾಡಿರುತ್ತಾರೆ. ನನಗೆ ಹಲ್ಲೆ





ಮಾಡಿದ ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಮಾರನೇ ದಿನ ದೂರನ್ನು ದಾಖಲಿಸಿರುತ್ತೇವೆ. ಹಲ್ಲೆ ಮಾಡಲಾಗಿತ್ತು ಎನ್ನುವ ಪೂರ್ವದಲ್ಲಿ ನಾನು ಹಾಲಗೊಂಡನಹಳ್ಳಿ ಗ್ರಾಮದಲ್ಲಿ ವಾಸವಾಗಿದ್ದೆ ಎಂದರೆ ಸಾಕ್ಷಿಯು ಗಂಡನ ಮನೆ ಹಾಗೂ ತವರು ಮನೆಗೆ ಓಡಾಡಿಕೊಂಡು ಚೆನ್ನಾಗಿ ಇದ್ದೆ ಎಂದು ನುಡಿಯುತ್ತಾರೆ.

ನಿಪಿ.6 ರಿಂದ 12 ದಾಖಲೆಗಳು ಹೊಡದಾಟಕ್ಕೆ ಸಂಬಂಧಿಸಿದ ದಾಖಲೆಗಳು ಅಲ್ಲ ಎಂದರೆ ಸರಿ. ನಿಪಿ.6 ರಿಂದ 12 ರಲ್ಲಿ ಹಲ್ಲೆಗೊಳಗಾಗಿತ್ತು ಎಂದು ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರಿದು ಹಲ್ಲೆ ಆಗಿದ್ದು ನಿಜ ಎಂದು ನುಡಿಯುತ್ತಾರೆ. ಎದುರುದಾರ ಹಲ್ಲೆ ಮಾಡಿದಾಗ ಫೋಟೋ ಹಾಗೂ ವಿಡಿಯೋ ಚಿತ್ರೀಕರಣ ಮಾಡಿಕೊಂಡಿರುವುದಿಲ್ಲ. ಯಾವುದೇ ಹಲ್ಲೆ ಆಗದ ಕಾರಣ ವಿಡಿಯೋ ಚಿತ್ರೀಕರಣ ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೊಬೈಲ್ ಫೋನನ್ನು ಹೊಂದಿರುವುದಿಲ್ಲ. ಮೊಬೈಲ್ ನಂ. 8431572701 ಯಾರದು ಎಂದು ನನಗೆ ಗೊತ್ತಿಲ್ಲ. ಮೊಬೈಲ್ ನಂ. 8431418360 ನನ್ನ ಅಜ್ಜಿಗೆ ಸೇರಿರುತ್ತದೆ. ಸದರಿ ನಂಬರಿನಲ್ಲಿ ಗೂಗಲ್ ಪೇ, ಫೋನ್ ಪೇ ಹಾಗೂ ವಾಟ್ಸ್ ಅಪ್ ಆ್ಯಕ್ಟೀವ್ ಇರುತ್ತದೆಯೇ ಎಂದರೆ ಸಾಕ್ಷಿಯು ಸದರಿ ನಂಬರನ್ನು ನನ್ನ ತಮ್ಮ ಉಪಯೋಗಿಸುತ್ತಿದ್ದರಿಂದ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನಗೆ ಕಡೆದರ ಹಳ್ಳಿ ಮಂಜುನಾಥ ಪರಿಚಯ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನನಗೆ ಹಾಲಗೊಂಡನಹಳ್ಳಿ ಮಂಜುನಾಥ ಪರಿಚಯವಿದ್ದು ಕಡೆದರ ಹಳ್ಳಿ ಮಂಜುನಾಥ ಪರಿಚಯ ಇಲ್ಲ ಎಂದು ನುಡಿಯುತ್ತಾರೆ. ಸದರಿ ಮಂಜುನಾಥ ನಮ್ಮ ಮನೆಗೆ ಬಂದಿದ್ದ ಎಂದರೆ ಸರಿಯಲ್ಲ. ಸದರಿ ಮಂಜುನಾಥ ನಾನು ಪರಶುರಾಂಪುರ ಪೊಲೀಸ್ ಠಾಣೆ ಯಲ್ಲಿ ದೂರನ್ನು ದಾಖಲಿಸುವಾಗ ಬಂದಿದ್ದ ಎಂದರೆ ಸರಿಯಲ್ಲ. ಮಂಜುನಾಥ ನನಗೆ ತುಂಬಾ ವರ್ಷಗಳಿಂದ ಪರಿಚಯಸ್ಥ ಎಂದರೆ ಸರಿಯಲ್ಲ. ಮಂಜುನಾಥ ಆತನ ಮೊಬೈಲ್ ನಂಬರ್ ಆದ 9964997440 ನಂಬರಿನಿಂದ ಮೊಬೈಲ್ ನಂಬರ್ 8431572701 ಗೆ ಬಹಳಷ್ಟು ಕರೆಗಳನ್ನು ಮಾಡುತ್ತಾನೆ ಎಂದರೆ ಸರಿಯಲ್ಲ. ಮೊಬೈಲ್ ನಂಬರ್ 8431572701 ನಿಂದ ಮಂಜುನಾಥ ಮೊಬೈಲ್ ನಂಬರಿಗೆ ಸಾಕಷ್ಟು ವಾಟ್ಸ್ ಅಪ್ ಮೇಸೇಜ್ ಗಳು ಬಂದಿರುತ್ತವೆ





ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದ ನನ್ನ ಬಳಿ ಮೊಬೈಲ್ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈ ಮುಂಚೆ ಮೊಬೈಲ್ ಅನ್ನು ಉಪಯೋಗಿಸಿದ್ದು ಈಗ ಉಪಯೋಗಿಸುತ್ತಿಲ್ಲ ಎಂದರೆ ಸರಿಯಲ್ಲ.

ನನ್ನ ಹಾಗೂ ಎದುರುದಾರನ ನಡುವೆ ದೈಹಿಕ ಸಂಭೋಗ ನಡೆದಿಲ್ಲ ಎಂದರೆ ಸರಿಯಲ್ಲ. ನಾನು ಮದುವೆಯಾದ ಮಾರನೇ ದಿನವೇ ಹಾಲಗೊಂಡನಹಳ್ಳಿ ಗ್ರಾಮಕ್ಕೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಮದುವೆಯಾದಾಗಿನಿಂದ ದಿನಾಂಕ 14.08.2022 ರವರೆಗೆ ಎದುರುದಾರನೊಂದಿಗೆ ದೈಹಿಕ ಸಂಪರ್ಕ ಹೊಂದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮೃತರಾಗಿದ್ದು, ನನ್ನ ತಾಯಿ ಅವರ ತವರು ಮನೆಯಲ್ಲಿ ಉಳಿದುಕೊಂಡಿದ್ದು ನಮ್ಮ ಜೊತೆ ವಾಸವಾಗಿರುವುದಿಲ್ಲ. ನನ್ನ ಅಜ್ಜಿ ಎದುರುದಾರನಿಗೆ ಸಂಬಂಧಿ ಆಗಬೇಕು ಎಂದರೆ ಸರಿಯಲ್ಲ. ನಾನು ಸದರಿ ವಿಚಾರವಾಗಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**( ಎದುರುದರರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,

ನ್ಯಾಯಾಧೀಶರು, ಚಳ್ಳಕೆರೆ.